**ಪಿಡಬ್ಲ್ಯೂ: 1**

**ದಿಃ 05-01-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ 2 ನೇ ಪ್ರತಿವಾದಿ** ಪರ ವಕೀಲರಿಂದಃ

ಜೀವನಾಂಶ ನಡೆಸಲು ನನಗೆ ಯಾವುದೇ ಆಸ್ತಿಗಳನ್ನು ಕೊಟ್ಟಿರುವುದಿಲ್ಲ. ದಾವಾ ಆಸ್ತಿ ಐಟಂ ನಂ. 4 ಸದಾಶಿವಪ್ಪ ನವರ ಹೆಸರಿನಲ್ಲಿದೆ. ಯಾರಯಾರಿಂದ ಕೊಂಡುಕೊಳ್ಳಲಾಯಿತು ಎಂದು ನನಗೆ ಹೇಳಲು ಆಗುವುದಿಲ್ಲ. ಸದಾಶಿವಪ್ಪ ನವರು ಐಟಂ ನಂ. 4 ನ್ನು 1980-81 ಮತ್ತು 1996-97 ರಲ್ಲಿ ಕೊಂಡುಕೊಂಡಿದ್ದಾರ ಎಂದರೆ ಇರಬಹುದು ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ಹಾಜರು ಪಡಿಸಿದ್ದೀರಾ ಎಂದು ಪ್ರಶ್ನಿಸಿದಾಗ ಸಾಕ್ಷಿಯು ನನಗೆ ಐಡಿಯಾ ಬರುತ್ತಿಲ್ಲ ಎಂದು ಹೇಳುತ್ತಾರೆ. ಸದರಿ ಆಸ್ತಿಗಳು 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ 2 ನೇಯ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ, ದೌರ್ಜನ್ಯದಿಂದ ಇದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಸರ್ವೆಐಟಂ ನಂ. 13/2, 85/ಪಿ2, 85/ಪಿ6 ಹಾಲಿ ಲೋಕೇಶಪ್ಪ ನವರ ಸ್ವಾಧೀನದಲ್ಲಿದೆ ಎಂದರೆ ಸರಿ. ಸರ್ವೆ ನಂ. 55/ಪಿ1, 132/3 ರಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಹೋದರ ಯತೀಶಪ್ಪ ರವರು ತೀರಿಕೊಂಡು ಸುಮಾರು 10 ರಿಂದ 12 ವರ್ಷವಾಗಿದೆ. ಯತೀಶಪ್ಪ ರವರ ಜಮೀನಿನಲ್ಲಿ ಲೋಕೇಶಪ್ಪ ಮತ್ತು ಸದಾಶಿವಪ್ಪ ರವರ ಸ್ವಾಧೀನದಲ್ಲಿದ್ದಾರೆ. ಸರ್ವೆ ನಂ. 13/5 ರಲ್ಲಿ 31 ಗುಂಟೆ, ಸರ್ವೆ ನಂ. 38/2 ಪಿ2 ಇವುಗಳಲ್ಲಿ ಅರ್ಧಹಿಸ್ಸೆಯಲ್ಲಿ ಷಣ್ಮುಖಪ್ಪ ರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ಸರ್ವೆ ನಂ. 13/8 ರಲ್ಲಿ 21 ಗುಂಟೆ, ಸರ್ವೆ ನಂ. 137/3 ರಲ್ಲಿ 3 ಎಕರೆ 22 ಗುಂಟೆ ಜಮೀನು ನೀವು ಸ್ವಾದೀನದಲ್ಲಿದ್ದೀರಾ ಎಂದರೆ ಸಾಕ್ಷಿಯು ಸದಾದಶಿವಪ್ಪ ರವರೂ ಕೂಡ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ದಾಖಲಾತಿಗಳನ್ನು ನಾನೇ ಹಾಜರು ಪಡಿಸಿದ್ದೇನೆ. ಸರ್ವೆ ನಂ. 29 ಕ್ಕೆ ಸಂಬಂದಪಟ್ಟಂತಹ ದಾಖಲಾತಿಗಳನ್ನುನಾನು ನೋಡಿದ್ದೇನೆ ಸಾಕ್ಷಿಗೆ ನಿ ಪಿ 7 ನ್ನು ತೋರಿಸಿ ಇದರಲ್ಲಿ ಸರ್ವೆ ನಂ. 29 ಕ್ಕೆ ಸಂಬಂದಪಟ್ಟಂತೆ ಯಾರ ಹೆಸರು ನಮೂದಾಗಿದೆ ಎಂದಾಗ ಸಾಕ್ಷಿಯು ಸದಾಶಿವಪ್ಪ ಬಿನ್ ದತ್ತು ತಂದೆ ಈಶ್ವರಪ್ಪ ಎಂದು ನುಡಿಯುತ್ತಾರೆ. ಮುಂದುವರೆದು ಸಾಕ್ಷಿಯು ತಪ್ಪಾಗಿ ನಮೂದಿಸಲಾಗಿದೆ ಎಂದು ನುಡಿಯುತ್ತಾರೆ. ತಪ್ಪಾಗಿದೆ ಎಂದು ಅರ್ಜಿಯನ್ನು ನಾನು ಕೊಟ್ಟಿರುವುದಿಲ್ಲ. ಸದಾಶಿವಪ್ಪ ರವರನ್ನು ದತ್ತು ತೆಗೆದುಕೊಂಡ ನಂತರ ಸದಾಶಿವಪ್ಪ ನವರನ್ನು ದತ್ತು ತೆಗೆದುಕೊಂಡ ನಂತರ ಅವರು ನನ್ನ ಜೊತೆಯಲ್ಲಿ ವಾಸ

ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಯಾವುದೇ ದಾಖಲಾತಿಗಳಿಲ್ಲ ಮತ್ತು ವರು ನನ್ನ ಜೊತೆ ಸ್ವಾಧೀನದಲ್ಲಿ ಇಲ್ಲದೇ ಇರವುದಿಲ್ಲ ಆದ್ದರಿಂದ ನಾನು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಸರ್ಕಾರಿ ದಾಖಲಾತಿಗಳಲ್ಲಿ ಸದಾಶಿವಪ್ಪ ಬಿನ್ ಈಶ್ವರಪ್ಪ ಎಂದೇ ನಮೂದಿಸಲಾಗಿದೆ ಎಂದರೆ ಸಾಕ್ಷಿಯು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

ಶಿವಲಿಂಗಮ್ಮ ಕೋಂ. ಈಶ್ವರಪ್ಪ, ರುದ್ರಮ್ಮ ಕೋಂ. ಈಶ್ವರಪ್ಪ ಇವರುಗಳು ನನ್ನ ಚಿಕ್ಕಮ್ಮಂದಿರು, 2 ನೇ ಪ್ರತಿವಾದಿಯು ಶಿವಲಿಂಗಮ್ಮ , ರುದ್ರಮ್ಮ ಮತ್ತು ಈಶ್ವರಪ್ಪ ಇವರುಗಳ ಜೊತೆಯಲ್ಲಿಯೇ ವಾಸ ಮಾಡಿಕೊಂಡಿದ್ದಾರೆ ಎಂದರೆ ಸರಿ . ಅದರೆ ಎರಡೂ ಕಡೆಯಲ್ಲಿಯೂ ವಾಸ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ನುಡಿಯುತ್ತಾರೆ . ಸದಾಶಿವಪ್ಪ ರವರನ್ನು ಮಗ ಎಂದು ತೋರಿಸಲು ಈಶ್ವರಪ್ಪ ರವರ ರೇಷನ್ ಕಾರ್ಡ್ ನಲ್ಲಿಯೂ ಕೂಡ ಹೆಸರು ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯು ತಮ್ಮ ತಕರಾರಿನಲ್ಲಿ ಹೇಳಿರುವಂತೆ ವಿಭಾಗ ಮಾಡಿಕೊಂಡು ಸ್ವಾಧೀನದಲ್ಲಿ ಎಲ್ಲರೂ ಇದ್ದಾರೆ ಎಂದರೆ ಸರಿಯಲ್ಲ. ಈಶ್ವರಪ್ಪನವರು ತೀರಿಕೊಂಡು ಎಷ್ಟು ವರ್ಷವಾಯಿತು ಎಂದು ನಾನು ಮರೆತಿರುತ್ತೇನೆ. ಈಶ್ವರಪ್ಪ ರವರು ತೀರಿಕೊಂಡಾಗ ನಮ್ಮ ತಂದೆ ಬದುಕಿದ್ದರು. ಸಾಕ್ಷಿಗೆ ಈಶ್ವರಪ್ಪ ನವರ ಸಾಮಾರಾಧನೆಯ ಪತ್ರವನ್ನು ತೋರಿಸಿ ಇದರಲ್ಲಿ ಈಶ್ವರಪ್ಪ ರವರ ಮಗ ಸದಾಶಿವಪ್ಪ ಎಂದು ನಮೂದಿಸಿದ್ದಾರ ಎಂದರೆ ಸರಿ. ಇದು ಈಶ್ವರಪ್ಪ ರವರ ಸಮಾರಾಧನೆಯ ಪತ್ರ ಎಂದು ತೋರಿಸಿದಾಗ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅಂತಹ ಪತ್ರದ ಪ್ರತಿಯನ್ನು ನಿ ಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪತ್ರವನ್ನು ತೋರಿಸಿ ಇದರಲ್ಲಿರುವ ಸಹಿ ನಿಮ್ಮದು ಎಂದರೆ ಅದು ನನ್ನ ಸಹಿ ಅಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಂತರದಲ್ಲಿ ಸಾಕ್ಷಿಯು ಸಾಲಕ್ಕೆ ಎಂದು ನನ್ನ ಸಹಿಯನ್ನುಮಾಡಿಸಿಕೊಂಡಿದ್ದರು ಇದು ನನ್ನ ಸಹಿ ಎಂದು ಪುನಃ ಹೇಳುತ್ತಾರೆ. ಸದರಿ ಸಹಿಯನ್ನು ಸದಾಶಿವಪ್ಪ ನವರು ಮಾಡಿಸಿಕೊಂಡಿದ್ದಾರೆ. ವಿಭಾಗ ಪತ್ರದಲ್ಲಿ ಸದಾಶಿವಪ್ಪ ನವರಿಗೆ 2 ನೇ ಪ್ರತಿವಾದಿ ಯಾವುದೇ ಆಸ್ತಿ ಇಲ್ಲ ಎಂದು ವಿಭಾಗ ಪತ್ರದಲ್ಲಿ ಬರೆದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತಿಲ್ಲ ಎನ್ನುತ್ತಾರೆ. ಲೋಕೇಶಪ್ಪ ನವರ ತಕರಾರಿನಲ್ಲಿ ತೋರಿಸಿರುವ ಆಸ್ತಿಗಳನ್ನೇ ವಿಭಾಗ ಪತ್ರದಲ್ಲಿಯೂ ಕೂಡ ಅವರವರ ಆಸ್ತಿಗಳನ್ನು ತೊರಿಸಲಾಗಿದೆ ಎಂದು ಸಾಕ್ಷಿಗೆ ವಿಭಾಗ ಪತ್ರವನ್ನು ತೋರಿಸಿದಾಗ, ಸಾಕ್ಷಿಯು ಅವರವರ ಹೆಸರಿಗೆ ತೋರಿಸಿದ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. 2000 ಇಸವಿಯಲ್ಲಿ ವಿಭಾಗ ಪತ್ರ ಮಾಡಿಕೊಂಡಿರುವುದರಿಂದ ಪುನಃ ವಿಭಾಗಪತ್ರ ಮಾಡಿಕೊಳ್ಳುವ ಪ್ರಮೇಯ ಇರಲಿಲ್ಲ ಎಂದರೆ

ಸರಿಯಲ್ಲ ಯಾವುದೇ ವಿಭಾಗವಾಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಬಿ ಶಡ್ಯೂಲ್ ಆಸ್ತಿಗೆ ತೋರಿಸಿದಂತಹ ದಾಖಲಾತಿಗಳನ್ನು ನಾನು ಹಾಜರು ಪಡಿಸಿರುವುದಿಲ್ಲ. ಸರ್ವೆ ನಂ. 10/5 ರಲ್ಲಿರುವ ಜಮೀನನ್ನು ಗಿರೀಶ್ ರವರಿಗೆ ಮಾರಾಟ ಮಾಡಿದ್ದರು. ಎಷ್ಟನೇ ಇಸವಿ ಎಂದು ಮರೆತಿದ್ದೇನೆ. 2018-19 ರಲ್ಲಿ ಮಾರಾಟ ಮಾಡಿದ್ದೀರಾ ಎಂದರೆ ಸರಿ. ನನ್ನ ತಂದೆಯವರು ಕುರುಬರಿಂದ ಸದರಿ ಆಸ್ತಿಯನ್ನು ಕೊಂಡು ಕೊಂಡಿದ್ದರು. ನಾನು ಸುಳ್ಳು ಹೇಳುತ್ತಿದ್ದೇನೆ. ಸದರಿ ಆಸ್ತಿಯನ್ನು 4ನೇ ಪ್ರತಿವಾದಿ ಲೋಕೆಶಪ್ಪ ರವರಿಂದ ಕೊಂಡು ಕೊಂಡಿದ್ದೇನೆ ಎಂದರೆ ಸರಿಯಲ್ಲ.ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸರ್ವೆ ನಂ. 85/3 ನ್ನೂ ಕೂಡ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ದಾವಾ ಶೆಡ್ಯೂಲ್ ಐಟಂ 4, 2 ನೇಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಮತ್ತು ಈಗಾಗಲೇ ಪಾಲು ವಿಭಾಗ ಮಾಡಿಕೊಂಡಿರುವುದರಿಂದ ಸದರಿ ಆಸ್ತಿಗಳನ್ನು ವಿಭಾಗ ಮಾಡಲು ಸಾದ್ಯವಿಲ್ಲಮತ್ತು ನನಗೆ ಈ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 2 ನೆಯ ಪ್ರತಿವಾದಿ ಈಶ್ವರಪ್ಪನವರ ದತ್ತು ಮಗನಾಗಿರುವುದರಿಂದ ಐಟಂ ನಂ. 4 ಮತ್ತು 10 ನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯಲ್ಲಿ ಹಕ್ಕು ಮತ್ತು ಬಾಧ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಈಶ್ವರಪ್ಪನವರಿಗೆ ಸೇರಿದ ಯಾವುದೇ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ ಸೇರಿಸಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಈಶ್ವರಪ್ಪ ನವರಿಗೆ ವಿಭಾಗದಲ್ಲಿ ಹೋದಂತಹ ಆಸ್ತಿಗಳು ಯಾವುವು ಎಂದು ಕೇಳಿದಾಗ ಸಾಕ್ಷಿಯು ನನಗೆ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಈಶ್ವರಪ್ಪನವರಿಗೆ ಬಂದಂಹ ಆದಾಯದಿಂದ ಸದಾಶಿವಪ್ಪರವರು ಐಟಂ 4 ಮತ್ತು 10 ನ್ನು ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಿಂದ ಬಂದಂತಹ ಆದಾಯದಿಂದ ಕೊಂಡುಕೊಳ್ಳಲಾಯಿತು ಎಂದು ಸಾಕ್ಷಿ ನುಡಿಯುತಾರೆ, ಸದರಿ ಆಸ್ತಿಯು ಸದಾಶಿವಪ್ಪ ರವರ ಸ್ವಯಾರ್ಜಿತ ಆಸ್ತಿ ಎಂದು ಗೊತ್ತಿದ್ದರೂ ಕೂಡ ನಾನು ಮತ್ತು ಉಳಿದ ಪ್ರತಿವಾದಿಗಳು ಸುಳ್ಳು ತಕರಾರನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. ದುರುದ್ದೇಶದಿಂದ ಈ ದಾವೆಯನ್ನು ಹೂಡಲಾಗಿದೆ ಎಲ್ಲರೂ ಕೂಡ ಭಾಗಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.